ಹೊಸರೀತಿಯ ಕಥೆಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ ಮೊಗಳ್ಳಿ ಗಣೇಶ್ ಹಿರಿಯ ಕಥೆಗಾರರು. ಕವಿ. ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿ ಅವರ ಹುಟ್ಟೂರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರು. ಅವರ ಪ್ರಮುಖ ಕೃತಿಗಳು 'ಬುಗುರಿ', 'ಮಣ್ಣು', 'ಅತ್ತೆ', 'ಭೂಮಿ', 'ಕನ್ನೆಮಳೆ'. ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ನಾಲ್ಕು ಬಾರಿ ಬಹುಮಾನ ಪಡೆದವರು. ಕಾದಂಬರಿ, ಪ್ರಬಂಧ ಮತ್ತು ವಿಮರ್ಶಾ ಕ್ಷೇತ್ರದಲ್ಲಿಯೂ ಅವರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಬೀಡಿಯ ಸೇದದೆ ಅರ್ಧಕ್ಕೇ ನಿಲ್ಲಿಸಿ ಕಿವಿಸಂದಿಯಲ್ಲಿ ಸಿಕ್ಕಿಸಿಕೊಂಡಿರುತ್ತಿದ್ದ. ಇಂತಹ ಗೋವಿಂದ ಆ ಜೀನಿಯಸ್ ಶ್ರೀಮಂತನಿಗೆ ತಕ್ಕ ಜೋಡಿ ಎಂದು ಪರಮಾನಂದ ಲೆಕ್ಕಿಸಿದ್ದ. ಅವೇ ಕೆಲವೊಮ್ಮೆ ಏನೇನೊ ಆಗಿಬಿಡುತ್ತವೆ. ಪ್ರಾಧ್ಯಾಪಕರ ಲಹರಿ ಎತ್ತಲೊ ಇತ್ತು. 'ಅಲ್ಲಾರೀ ಆ ಬೀಚುಗಳಲ್ಲಿ ಮಾತ್ರ ಯಾಕೆ ಹೆಂಗಸರು ತುಂಡು ಬಟ್ಟೆತೊಟ್ಟು ಸಮುದ್ರದ ಅಲೆಗಳ ಹಂಗಿಸುವಂತೆ ಅಡ್ಡಾಡುವರು. ದಸರಾ ಹಬ್ಬದಲ್ಲೊ ಹಬ್ಬ ಹರಿದಿನಗಳಲ್ಲೊ ಯಾಕೆ ಈ ಚೆಲುವೆಯರು ಅರೆಬೆತ್ತಲೆಯಾಗಿ ನಲಿದಾಡುವುದಿಲ್ಲಾ...' ಎಂದು ಲೊಚಗುಟ್ಟಿದರು. 'ಅದೇ ಪ್ರಶ್ನೆ ಸಾರ್... ಯಾರ ಹೆಣ್ಣು ಮಕ್ಕಳು ಬೆತ್ತಲೆ ಸೇವೆ ಮಾಡಬೇಕು' ಎಂದು ಗೋವಿಂದ ವಿಚಾರವಾದಿ ಗೆಶ್ಚರ್ ಕೊಟ್ಟ. 'ನಾನೇನೊ ಹೇಳಿದ್ರೆ ಈತ ಎಲ್ಲೆಲ್ಲಿಗೊ ಲಿಂಕ್ ಮಾಡಿಕೊಂಡು ಹುಬ್ಬು ಕುಣಿಸುತ್ತಾನೆ' ಎಂದು ಪ್ರಾಧ್ಯಾಪಕರು ಪರಮಾನಂದನತ್ತ ರೇಗುತ್ತಾ; 'ಎಲ್ರೀ ಆ ಮನುಷ್ಯ? ಇನ್ನೂ ಬಂದಿಲ್ಲವಲ್ಲಾ... ಹಿಂದೆ ಪಾಪ ನಮ್ಮ ದಲಿತರು ಹಬ್ಬಗಳಲ್ಲಿ ಎಲ್ಲರ ಊಟ ಮುಗಿಯೊ ತನಕ ಉಳಿದು ಬಳಿದಿದ್ದಕ್ಕಾಗಿ ಕಾಯ್ತಿದ್ರು. ಇಲ್ಲಿ ನಮ್ಮ ಕಥೆಯೂ ಅಂಗೇ ಐತೇನೋ... ಕರೀರಿ ಅವನ್ನ' ಎನ್ನುವುದಕ್ಕೂ ತೆರೆ ಮರೆಯಲ್ಲಿ ನಿಂತಿದ್ದು ಕೇಳಿಸಿಕೊಂಡವನಂತೆ ಧುತ್ತೆಂದು ಉದ್ಯಮಿ ಆಗಮಿಸಿದ. ಎಲ್ಲರೂ ಎದ್ದು ನಿಂತೆವು. 'ಕ್ಷಮಿಸಿ ಸಾರೀ... ಇಂಪಾರ್ಟೆಂಟ್ ಕಾಲ್ ಇತ್ತು ಲೇಟಾಯ್ತು' ಎಂದು ಒಬ್ಬೊಬ್ಬರ ಕೈಕುಲುಕಿ ಪರಿಚಯ ಮಾಡಿಕೊಂಡ ಆ ಶ್ರೀಮಂತ.

ಮಾಂತ್ರಿಕ ಬಣ್ಣದ ಬೆಳಕಿನ ತೆರೆಗಳು ಒಂದೊಂದಾಗಿ ಗೋಚರಿಸಿದವು. ನಮಗೆ ಬಹಳ ನಿರಾಶೆ ಉಂಟಾಯಿತು. ಆ ಶ್ರೀಮಂತ ಬಡವರಿಗೆ ಬಡವನಂತಿದ್ದ. ಯಾವ ಅದ್ದೂರಿಯೂ ಇಲ್ಲ. ಕೋಟ್ಯಧಿಪತಿ ಎಂದರೆ ಹೇಗಿರಬೇಕು... ನಂಬಲಾಗಲಿಲ್ಲ. ಒಬ್ಬ ಸರ್ವರ್ ತರ ಇದ್ದ. ಗೋವಿಂದ ಹಾಲಿವುಡ್ ನಟನಂತೆ ಯಾವುದೊ ಡೈಲಾಗ್ ಹೊಡೆದ. 'ಪಂಪನ ನಾಡಿದು; ಕಂಪಿನ ಕನ್ನಡವೇ ಇಂಪು ಇಲ್ಲಿ' ಎಂದು ಆ ಶ್ರೀಮಂತ ನಮ್ಮನ್ನು ಬೆಚ್ಚಿಸಿದ. ಆದರೂ ದಪ್ಪ ಸಿಗರೇಟನ್ನು ಮರದ ದಿಮ್ಮಿಯಂತೆ ಬಾಯಲ್ಲಿ ಹೊರಳಾಡಿಸುತ್ತ ಮೊಘಲ್ ದೊರೆಗಳಂತೆ 'ವಾಹವ್ವ್' ಎಂದು ಹೊಗೆ ಬಿಟ್ಟ. ಅದೇ ವೇಳೆಗೆ ಗೋವಿಂದನ ಹಿಂಬದಿಯಿಂದ ಹೂಸೊಂದು ಅನಾದಿ ಕಾಲದ ಮಾನವ ಚಟುವಟಿಕೆ ಎಂಬಂತೆ ಕರಗಿ ಹೋಯಿತು. ಆ ಶ್ರೀಮಂತನ ಒಳಗೂ ಆದಿ ಮಾನವ ಕೂತಿದ್ದ. ಗೋವಿಂದನ ಹೂಸಾಣುಗಳನ್ನು ಕ್ಷಣ ಮಾತ್ರದಲ್ಲಿ ಪತ್ತೆ ಮಾಡಿ ಅವನ ಮುಖವ ದಿಟ್ಟಿಸಿದ. ಅದಾಗಲೇ ವಿಸ್ಕಿ ತುಂಬಿದ ಗ್ಲಾಸುಗಳು ಚಿಯರ್ಸ್ ಹೇಳಿದ್ದವು. ಗಣ್ಯನ ನಡತೆ ಬಹಳ ಅಸಂಗತವಾಗಿತ್ತು. ಅವನು ಜೀನಿಯಸ್ ಎಂಬುದರಲ್ಲಿ ಹಾಗೂ ರಾಯಲ್ ಎಂಬುದರಲ್ಲಿ ಅನುಮಾನ ಇರಲಿಲ್ಲ.

ಇಂಗ್ಲೆಂಡಿನಲ್ಲಿ ಆತ ಓದುತ್ತಿದ್ದಾಗ ವಿಕ್ಟೋರಿಯಾ ರಾಣಿಯ ಕಂಡು ಮಾತಾಡಿಸಿದ್ದ. ಅವರ ಕುಟುಂಬದ ಯುವರಾಜರ ಜೊತೆ ಗಾಲ್ಫ್ ಆಡಿದ್ದ. ಬ್ರಿಟಿಷರ ಕಾಲದಲ್ಲಿ ಆ ಜೀನಿಯಸ್ಸನ ಪೂರ್ವಿಕರು ಪಾಳೆಯಗಾರರಾಗಿ ಟಿಪ್ಪು ವಿರುದ್ಧ ಕೈಜೋಡಿಸಿದ್ದರು. 'ಆ ರಾಯಲ್ ಕಾಲದ ಪೋಟೋ ಆಲ್ಬಮ್ ನೋಡ್ತೀರಾ... ಸಮಯ, ಉತ್ಸಾಹ ಇದೆಯಾ' ಎಂದು ಕೇಳಿದ್ದ. ಅವೆಲ್ಲ ನಮಗೆ ಬೇಸರದ ಸಂಗತಿಗಳಾದ್ದರಿಂದ 'ಇಲ್ಲಾ' ಎಂದಿದ್ದೆವು. 'ನಿಮ್ಮ ಅಂಗರಕ್ಷಕರನ್ನು ಅತ್ತ ಮರೆಗೆ ಕಳಿಸಿ... ಭಯವಾಗುತ್ತದೆ... ಹೆಣ್ಣು ಮಕ್ಕಳು ಇಲ್ಲಿ ಯಾರೂ ಇಲ್ಲವೇ' ಎಂದು ಪ್ರೊಫೆಸರ್ ಕೇಳಿದ್ದರು. 'ಇದ್ದಾರೇ... ನೀವು ಮೂರು ಸಾರಿ ಶ್ರೀಗಂಧದಲ್ಲಿ